ಒದಗಿಸಿಲ್ಲ ಪ್ರಾವಿಜನ್ ಮಾಡಿಕೊಂಡಿಲ್ಲ ಅದಕ್ಕೆ ಏನು ಮಾಡುತ್ತೀರಿ ಎಂದು ವಿವರಣೆ ನೀಡಬೇಕೆಂದು ಕೇಳುತ್ತಾ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

4 ವರದಿಯನ್ನೊಪ್ಪಿಸುವುದು

ವಿಷಯ ಅಧೀನ ಶಾಸನಾ ರಚನಾ ಸಮಿತಿಯ 2006–2007ನೇ ಸಾಲಿನ 33ನೇ ವಿಶೇಷ ವರದಿ

ಶ್ರೀ ಎನ್ ಯೋಗೀಶ್ ಭಟ್ (ಮಂಗಳೂರು) – ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮತಿಯ ಅಧ್ಯಕ್ಷನಾದ ನಾನು 2006–2007ನೇ ಸಾಲಿಗೆ ಆರ್ಥಿಕ ಇಲಾಖೆಯಡಿಯಲ್ಲಿ ಬರುವ ವಾಣಿಜ್ಯ ತೆರಿಗೆ ಇಲಾಖೆಗೆ ಸಂಬಂಧಿಸಿದಂತೆ ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರದ ಓಎಫ್‌ಸಿ ಮೂಲಕ ಬ್ರಾಡ್ ಬ್ಯಾಂಡ್ ಸೇವೆ ನೀಡುವ ದೂರಸಂಪರ್ಕ ಸಂಸ್ಥೆಗಳು ಸರ್ಕಾರಕ್ಕೆ ತೆರಿಗೆ ವಂಚನೆ ಮಾಡುತ್ತಿರುವ ಬಗೆಗಿನ ವಿಶೇಷ ವರದಿ, ಮೂವತ್ಮೂರನೇ ವರದಿಯನ್ನು ಸಮಿತಿಯ ಪರವಾಗಿ ಮಂಡಿಸುತ್ತಿದ್ದೇನೆ

ಉಪಾಧ್ಯಕ್ಷರು – ವರದಿಯನ್ನೊಪ್ಪಿಸಲಾಯಿತು

(5) ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ದೇವದಾಸಿಯರ ಅಭಿವೃದ್ಧಿಗಾಗಿ ಮನೆ ನಿರ್ಮಾಣ ಮತ್ತು ವಿಧವಾ ವೇತನ

286 (1929) ಶ್ರೀ ರೋಷನ್ ಬೇಗ್ ಆರ್ (ಜಯಮಹಲ್) – ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ, ಬಿಜಾಪುರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿನ ದೇವದಾಸಿಯರ ಅಭಿವೃದ್ಧಿಗಾಗಿ 15000 ಮನೆಗಳನ್ನು ನಿರ್ಮಿಸಿ ಅವರಿಗೆ ಒದಗಿಸಲಾಗುವುದೆಂದು ಮಾನ್ಯ ಮುಖ್ಯ ಮಂತ್ರಿಯವರು ಘೋಷಿಸಿರುವುದು ನಿಜವೇ,

ಆ) ಹಾಗಿದ್ದಲ್ಲಿ, ಮನೆಗಳ ನಿರ್ಮಾಣ ಮಾಡಲಾಗಿದೆಯೇ,

ಇ) ಈ ಯೋಜನೆಗಾಗಿ ಸರ್ಕಾರ ನಿಗಧಿಪಡಿಸಿರುವ ಹಣ ಎಷ್ಟು? ಈ ಕಾರ್ಯಕ್ರಮ ಯಾವ ಹಂತದಲ್ಲಿದೆ?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ಹೌದು ಗುಲ್ಬರ್ಗಾ, ಬಿಜಾಪುರ, ಬೆಳಗಾವಿ ಜಿಲ್ಲೆಗಳನ್ನು ಒಳಗೊಂಡಂತೆ ರಾಜ್ಯಾದ್ಯಂತ ದೇವದಾಸಿಯರ ಅಭಿವೃದ್ಧಿಗಾಗಿ 15000 ಮನೆಗಳನ್ನು ನಿರ್ಮಿಸಿ ಒದಗಿಸಲಾಗುವುದೆಂದು ಮಾನ್ಯ ಮುಖ್ಯ ಮಂತ್ರಿಯವರು ಘೋಷಿಸಿರುತ್ತಾರೆ

ಆ) ಇದಕ್ಕಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ದೇವದಾಸಿಯರ ಪಟ್ಟಿಯನ್ನು ಪಡೆಯಲಾಗುತ್ತಿದ್ದು, ಇದುವರೆವಿಗೂ ಗ್ರಾಮೀಣ ಪ್ರದೇಶಕ್ಕೆ ಸೇರಿದ 10065 ಫಲಾನುಭವಿಗಳ ಪಟ್ಟಿಯನ್ನು ಪಡೆಯಲಾಗಿದೆ ಈ ಪಟ್ಟಿಯನ್ನು ಸಂಬಂಧಪಟ್ಟ ಜಿಲ್ಲೆಗಳಿಗೆ ಫಲಾನುಭವಿಗಳ ಅರ್ಹತೆಯನ್ನು ಪರಿಶೀಲಿಸಿ ದಾಖಲೀಕರಣ ಪ್ರಕ್ರಿಯೆ ಪೂರ್ಣಗೊಳಿಸಿ ನಿಗಮದಿಂದ ಅನುಮೋದನೆ ಪಡೆದುಕೊಂಡು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಈಗಾಗಲೇ ತಿಳಿಸಲಾಗಿದೆ

ಇ) ಈ ಯೋಜನೆಯನ್ನು ಗ್ರಾಮೀಣ ಆಶ್ರಯ 2006–07ನೇ ಸಾಲಿನಲ್ಲಿ ಹೆಚ್ಚುವರಿ ಗುರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ಪ್ರತಿ ಮನೆಯ ಘಟಕ ವೆಚ್ಚವು ರೂ.30,000/– ಗಳಾಗಿರುತ್ತದೆ ಇದರಲ್ಲಿ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ರೂ 15,000/– ಸಹಾಯಧನ ಹಾಗೂ ರೂ 15,000/– ಸಾಲದ ರೂಪದಲ್ಲಿರುತ್ತದೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಫಲಾನುಭವಿಗಳಿಗೆ ನೀಡುವ ಪೂರ್ತಿ ಅನುದಾನವು ಸಹಾಯಧನವಾಗಿರುತ್ತದೆ ಫಲಾನುಭವಿಗಳ ಅರ್ಹತೆಯ ಪರಿಶೀಲನೆಯ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು ದಾಖಲೀಕರಣ ಪೂರ್ಣಗೊಂಡ ನಂತರ ಪ್ರಗತಿಗೆ ಅನುಗುಣವಾಗಿ ನಿಗಮದಿಂದ ಪ್ರತಿ ವಾರ ಅನುದಾನವನ್ನು ನೇರವಾಗಿ ಸಂಬಂಧಪಟ್ಟ ಗ್ರಾಮ ಪಂಚಾಯ್ತಿಗಳಿಗೆ Net Banking ಮುಖಾಂತರ ಬಿಡುಗಡೆಗೊಳಿಸುವ ವ್ಯವಸ್ಥೆ ಮಾಡಲಾಗಿರುತ್ತದೆ

3/24

ಅನುಬಂಧ "ಅ"

ಕ್ರಸಂ	ಜಿಲ್ಲೆ	ತಾಲ್ಲೂಕು	ದೇವದಾಸಿ ಫಲಾನುಭವಿಗಳ ಸಂಖ್ಯೆ
1	2	3	4
1	ಹಾವೇರಿ	ಹಾವೇರಿ	103
2	ಹಾವೇರಿ	ಸವಣೂರು	81
3	ಹಾವೇರಿ	ಶಿಗ್ಗಾವಿ	33
4	ಹಾವೇರಿ	ರಾಣೇಬೆನ್ನೂರು	85
5	ಹಾವೇರಿ	ಬ್ಯಾಡಗಿ	27
6	ಹಾವೇರಿ	ಹಿರೇಕೆರೂರು	44
7	ಹಾವೇರಿ	ಹಾನಗಲ್	9
	ಹಾವೇರಿ ಜಿಲ್ಲೆ ಒಟ್ಟು		**382**
8	ಗದಗ	ಗದಗ	211
9	ಗದಗ	ಮುಂಡರಗಿ	98
10	ಗದಗ	ರೋಣ	344
11	ಗದಗ	ನರಗುಂದ	61
12	ಗದಗ	ಶಿರಹಟ್ಟಿ	249
	ಗದಗ ಜಿಲ್ಲೆ ಒಟ್ಟು		**963**
13	ಧಾರವಾಡ	ಧಾರವಾಡ	12
14	ಧಾರವಾಡ	ಹುಬ್ಬಳ್ಳಿ ಗ್ರಾಮೀಣ	48
15	ಧಾರವಾಡ	ಹುಬ್ಬಳ್ಳಿ ನಗರ	0
16	ಧಾರವಾಡ	ಕಲಘಟಗಿ	14

17	ಧಾರವಾಡ	ನವಲಗುಂದ	71
18	ಧಾರವಾಡ	ಕುಂದಗೋಳ	66
	ಧಾರವಾಡ ಜಿಲ್ಲೆ ಒಟ್ಟು		**211**
19	ಬಿಜಾಪುರ	ಬಿಜಾಪುರ	403
20	ಬಿಜಾಪುರ	ಸಿಂದಗಿ	246
21	ಬಿಜಾಪುರ	ಇಂಡಿ	113
22	ಬಿಜಾಪುರ	ಬಸವನಬಾಗೇವಾಡಿ	353
23	ಬಿಜಾಪುರ	ಮುದ್ದೇಬಿಹಾಳ	210
	ಬಿಜಾಪುರ ಜಿಲ್ಲೆ ಒಟ್ಟು		**1325**
24	ಬಾಗಲಕೋಟೆ	ಜಮಖಂಡಿ	286
25	ಬಾಗಲಕೋಟೆ	ಮುಧೋಳ	362
26	ಬಾಗಲಕೋಟೆ	ಬೀಳಗಿ	16
27	ಬಾಗಲಕೋಟೆ	ಬಾಗಲಕೋಟೆ	17
28	ಬಾಗಲಕೋಟೆ	ಬಾದಾಮಿ	17
29	ಬಾಗಲಕೋಟೆ	ಹುನಗುಂದ	2
	ಬಾಗಲಕೋಟೆ ಜಿಲ್ಲೆ ಒಟ್ಟು		**700**
30	ಗುಲ್ಬರ್ಗಾ	ಶಾಹಾಪುರ	209
31	ಗುಲ್ಬರ್ಗಾ	ಚಿಂಚೋಳಿ	18
32	ಗುಲ್ಬರ್ಗಾ	ಸೇಡಂ	24
33	ಗುಲ್ಬರ್ಗಾ	ಅಫಜಲಪುರ	53
34	ಗುಲ್ಬರ್ಗಾ	ಸುರಪುರ	105
35	ಗುಲ್ಬರ್ಗಾ	ಜೇವರ್ಗಿ	91

36	ಗುಲ್ಬರ್ಗಾ	ಆಳಂದ	86
37	ಗುಲ್ಬರ್ಗಾ	ಚಿತ್ತಾಪುರ	83
38	ಗುಲ್ಬರ್ಗಾ	ಯಾದಗಿರ್	55
	ಗುಲ್ಬರ್ಗಾ ಜಿಲ್ಲೆ ಒಟ್ಟು		**724**
39	ಕೊಪ್ಪಳ	ಕೊಪ್ಪಳ – ನಗರ	0
40	ಕೊಪ್ಪಳ	ಕೊಪ್ಪಳ – (ಗ್ರಾ)	484
41	ಕೊಪ್ಪಳ	ಗಂಗಾವತಿ – ನಗರ	0
42	ಕೊಪ್ಪಳ	ಗಂಗಾವತಿ – (ಗ್ರಾ)	458
43	ಕೊಪ್ಪಳ	ಯಲಬುರ್ಗಾ – ನಗರ	0
44	ಕೊಪ್ಪಳ	ಯಲಬುರ್ಗಾ – (ಗ್ರಾ)	132
45	ಕೊಪ್ಪಳ	ಕುಷ್ಟಗಿ – ನಗರ	0
46	ಕೊಪ್ಪಳ	ಕುಷ್ಟಗಿ – (ಗ್ರಾ)	156
	ಕೊಪ್ಪಳ ಜಿಲ್ಲೆ ಒಟ್ಟು		**1230**
47	ಬೆಳಗಾವಿ	ಅಥಣಿ	314
48	ಬೆಳಗಾವಿ	ರಾಯಭಾಗ	193
49	ಬೆಳಗಾವಿ	ಖಾನಾಪುರ	13
50	ಬೆಳಗಾವಿ	ಹುಕ್ಕೇರಿ	198
51	ಬೆಳಗಾವಿ	ಚಿಕ್ಕೋಡಿ	111
52	ಬೆಳಗಾವಿ	ಬೈಲಹೊಂಗಲ	53
53	ಬೆಳಗಾವಿ	ರಾಮದುರ್ಗ	267
54	ಬೆಳಗಾವಿ	ಸವದತ್ತಿ	51
55	ಬೆಳಗಾವಿ	ಗೋಕಾಕ	187

56	ಬೆಳಗಾವಿ	ಬೆಳಗಾವಿ	5
	ಬೆಳಗಾವಿ ಜಿಲ್ಲೆ ಒಟ್ಟು		**1392**
57	ಬಳ್ಳಾರಿ	ಹೊಸಪೇಟೆ	670
58	ಬಳ್ಳಾರಿ	ಸಂಡೂರು	506
	ಬಳ್ಳಾರಿ ಜಿಲ್ಲೆ ಒಟ್ಟು		**1176**
59	ರಾಯಚೂರು	ಲಿಂಗಸುಗೂರು	562
60	ರಾಯಚೂರು	ಸಿಂಧನೂರು	593
61	ರಾಯಚೂರು	ಮಾನ್ವಿ	464
62	ರಾಯಚೂರು	ದೇವದುರ್ಗ	324
63	ರಾಯಚೂರು	ರಾಯಚೂರು	19
	ರಾಯಚೂರು ಜಿಲ್ಲೆ ಒಟ್ಟು		**1962**
		ಅಂತೂ ಒಟ್ಟು	**10065**

ಶ್ರೀ ಆರ್ ರೋಷನ್ ಬೇಗ್ – ಅವರೊಂದು ಪಟ್ಟಿಯನ್ನು ಕೊಟ್ಟಿದ್ದಾರೆ ಇದು ಯಾವಾಗ ಆರಂಭವಾಗುತ್ತದೆ? ತಾವು list of beneficiaries ಎಂದು ತೋರಿಸಿದ್ದೀರಿ Year end ನಲ್ಲಿ ಪ್ರಾರಂಭ ಮಾಡುತ್ತೇವೆ ಇಲ್ಲವೆಂದರೆ, ಮುಂದಿನ ವರ್ಷ ಮುಗಿಸುತ್ತೇವೆ ಎನ್ನುವ target ಏನಾದರೂ ಹಾಕಿಕೊಂಡಿದ್ದೀರಾ?

ಶ್ರೀ ಡಿ ಟಿ ಜಯಕುಮಾರ್ – ಇದು ಒಂದು ಹೊಸ ಯೋಜನೆ ಮಾನ್ಯ ಮುಖ್ಯಮಂತ್ರಿಗಳ ಒಂದು ಮಹತ್ವವಾದ ವಿಚಾರ ಅವರು ದೇವದಾಸಿ ಪದ್ಧತಿಯಲ್ಲಿರುವವರನ್ನು ಗುರುತಿಸಿ, ಅವರ ಸ್ಥಿತಿಗತಿಗಳನ್ನು ನೋಡಿ ಅವರಿಗೆ ಮನೆಗಳನ್ನು ಮಾಡಿ ಕೊಡಬೇಕೆನ್ನುವುದು ಸರ್ಕಾರದ ಘನ ಉದ್ದೇಶ ಇದಕ್ಕಾಗಿ 15 ಸಾವಿರ ಮನೆಗಳನ್ನು ಮಾಡಬೇಕೆಂದು ಹಣದ ವ್ಯವಸ್ಥೆಯನ್ನು ಮಾಡಿಕೊಂಡಿದ್ದು ಅದನ್ನು ಮಂಜೂರು ಮಾಡಿದ್ದೇವೆ ಇದರಲ್ಲಿ ಅನುಬಂಧ – ಅ ನಲ್ಲಿ ಕೊಟ್ಟಿರುವ ಹಾಗೆ ಈಗಾಗಲೇ 10065 ದೇವದಾಸಿ ಫಲಾನುಭವಿಗಳನ್ನು ಗುರುತಿಸಿದ್ದೇವೆ

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಏನು ಇದೆ, ಅವರಿಂದ ಸರ್ಟಿಫೈ ಮಾಡಿ ಅವರು ಕೊಡಬೇಕಾಗುತ್ತದೆ ಹೀಗಾಗಿ ನಾವು ಅವರಿಗೆ ಆ ಪಟ್ಟಿಯನ್ನು ಕೊಟ್ಟು ಈ ಮಾಹಿತಿ ಸರಿ ಇದೆಯೋ ಇಲ್ಲವೋ ಎಂದು scrutiny ಮಾಡಿ ಕೊಡಿ ಎಂದು ಹೇಳಿದ್ದೇವೆ ಅವರಿಂದ ಬಂದ ತಕ್ಷಣ ನಾವು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ ಅವರೇನಾದರೂ ಎಸ್‌ಸಿ–ಎಸ್‌ಟಿ ಪಂಗಡದವರಾಗಿದ್ದರೆ ಅವರಿಗೆ ಸಂಪೂರ್ಣವಾಗಿ 30 ಸಾವಿರ ರೂಪಾಯಿಯ ಅನುದಾನವನ್ನು ಕೊಡುತ್ತೇವೆ ದೇವದಾಸಿ ಪದ್ಧತಿಯೊಳಗೆ ಜನರಲ್ ಕಮ್ಯುನಿಟಿಯವರು ಏನಾದರೂ ಬಂದರೆ ಅವರಿಗೆ 15 ಸಾವಿರ ಸಬ್ಸಿಡಿ ಮತ್ತು 15 ಸಾವಿರ ರೂಪದಲ್ಲಿ ಕೊಡುತ್ತೇವೆ ಒಟ್ಟಿನಲ್ಲಿ ಒಂದು ಯೂನಿಟ್ ಕಾಸ್ಟ್ 30 ಸಾವಿರ ರೂಪಾಯಿ ಎಂದು ಮಾಡಿ ಮನೆಗಳನ್ನು ಕಟ್ಟಿಸತಕ್ಕಂತಹ ಕೆಲಸವನ್ನು ಮಾಡಿದ್ದೇವೆ Scrutiny ಆದ ತಕ್ಷಣ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ಪ್ರಾರಂಭ ಮಾಡುತ್ತೇವೆ

ಶ್ರೀ ಆರ್ ರೋಷನ್ ಬೇಗ್ – ಯಾವಾಗ ಆರಂಭ ಮಾಡುತ್ತೀರಿ?

ಶ್ರೀ ಡಿ ಟಿ ಜಯಕುಮಾರ್ – ಇದು ನೂತನ ಯೋಜನೆಯಾಗಿದ್ದು ಈಗಾಗಲೇ 10065 ಜನರನ್ನು ಗುರುತಿಸಿದ್ದು ಅವರ ಬಗ್ಗೆ scrutiny ನಡೆಯುತ್ತಿದೆ, ಅಲ್ಲಿಂದ ಬಂದ ತಕ್ಷಣ ಮನೆಕಟ್ಟತಕ್ಕಂಥ ಕೆಲಸವನ್ನು ಪ್ರಾರಂಭ ಮಾಡುತ್ತೇವೆ

ಶ್ರೀ ಆರ್ ರೋಷನ್ ಬೇಗ್ – ಏನಾದರೊಂದು ಡೆಡ್‌ಲೈನ್ ಇಟ್ಟಿದ್ದೀರಾ? scrutiny by this date complete ಆಗಬೇಕು, ಈ ತಿಂಗಳಿನಿಂದ ನಾವು ಪ್ರಾರಂಭ ಮಾಡುತ್ತೇವೆಂದು ಹೇಳಿದರೆ ಅನುಕೂಲ

ಶ್ರೀ ಡಿ ಟಿ ಜಯಕುಮಾರ್ – ಇದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ನಾವು ಆ ಜವಾಬ್ದಾರಿಯನ್ನು ವಹಿಸಿದ್ದೇವೆ ಅವರು ಅದನ್ನು scrutiny ಮಾಡಿ ಇವರು ಸರಿಯಾಗಿದೆ ಎಂದು ಸರ್ಟಿಫೈ ಮಾಡಿದರೆ ಮನೆಗಳನ್ನು ಕಟ್ಟಲಿಕ್ಕೆ ಪ್ರಾರಂಭ ಮಾಡುತ್ತೇವೆ

ಪ್ರಶ್ನೆ ಸಂಖ್ಯೆ 1317

ಉಪಾಧ್ಯಕ್ಷರು – ಪಾಟೀಲರೆ, ಮಂತ್ರಿಗಳು ಸಬ್ ಕಮಿಟಿಯಲ್ಲಿದ್ದಾರಂತೆ ಅವರು ಬಂದ ಮೇಲೆ ಇದನ್ನು ತೆಗೆದುಕೊಳ್ಳೋಣ